# ಬಯಲ ಬುತ್ತಿ

ಇಲ್ಲಿ ಗುಟ್ಟು ಮಾಡುವಂಥದ್ದು ಏನೂ ಇಲ್ಲ
ಎಲ್ಲವೂ ಗುರು ಕಟ್ಟಿಕೊಟ್ಟ ಬುತ್ತಿ
ಬಯಲಲ್ಲಿ ಇಟ್ಟ ಗಂಟು
ಯಾರಾದರೂ ಬರಬೈದು
ಬುತ್ತಿ ಬಿಚ್ಚಬೈದು ಉಣ್ಣಬೈದು
ಬರುವವರಿಗೆ ಹಸಿವಿರಬೇಕು
ಅವರವರ ಮೇಲಿರುವ ಅವರವರನ್ನು ಕೆಳಗಿಳಿಸಿ
ಇರುವಂತೆಯೇ ಬರಬೇಕು.




ಕಲೆ: ವಾಗೀಶ ಹೆಗಡೆ

ಹೊಲ ಇದೆ ಬೀಜ ಇದೆ ಅಂದರಾತೆ
ತಟ್ಟೆಗೆ ಅನ್ನ ಬಂತೆ
ಬಿತ್ತದೆ ಬೆಳೆಯದೆ ಕಾಯದೆ ಕಟ್ಟದೆ
ಉತ್ತರಾಸವ ದಾಟದೆ ಅಲ್ಲೆ ನಿಂತರೆ
ಒಳ ಹೊರಗೆ ದಾಟದೆ ಬಯಲಿಗೆ ಬಾರದೆ

ಪದವ ಕಟ್ಟಿದರೇನು ಏಕತಾರಿಯ ಮೀಟಿದರೇನು
ಕಿವಿದೆಸೆಗೆ ತಾರದೆ ದಂಡಿಗೆಯನೇಕಗೊಳಿಸದೆ
ಸ್ವರದ ಹುಳ್ಳಿ ಬೇಯುವುದೂ ಇಲ್ಲ ಬೆಂಗಳೂ ಇಲ್ಲ
ಕ್ವಾಡೊಲೆಗೆ ಕಾವು ತಾಗದೆ ಪದವೂ ಇಲ್ಲ ಪದಾತವೂ ಇಲ್ಲ

ಇದೆಂತಾ ಮಾತು ಪದ ಉಳಿಯಬೇಡವೆ
ಲೋಕವ ತೂಗಬೇಡವೆ ಮಗು ಮಲಗಬೇಡವೆ?
ಬಂದದ್ದು ಬಂದಂಗೇ ಹೋದರೆ ನೀರು ನಿಲ್ಲಬೇಡವೆ
ದಿನ ತುಂಬಿ ಹಾಡ ಹೆರಬೇಡವೆ?



ಮಡಕೆ ತುಂಬಿಕೊಂಡಿದೆ ಕಣೋ ಪರದೇಸಿ
ನಿನ್ನ ಪಾಲಿಗೆ ಇವತ್ತು ಪದವಿಲ್ಲ ಪದಾತವಿಲ್ಲ
ಎಲ್ಲಿ, ಜೋಳಿಗೆ ಒಡ್ಡು ಇಲ್ಲಗಳನ್ನೇ ನೀಡುತ್ತೇನೆ
ಅಲ್ಲಮಗುರುವಿಗೆ ಒಪ್ಪಿಸಿಬಿಡು

‘ಅವ್ವ, ಪದ ಕಳೆದುಹೋದರೆ ಯಾವುದು ಉಳಿದಾತು?
ಆದಿಲ್ಲದಿರೆ ನಾದ ಲಯಗಳು ಬೇ–ಸಾಥು’
‘ಹೋದರೆ ಹೋಗಲೇಳು ಮಗಾ,
ಇನ್ನೆರಡ ಕಟ್ಟಿಕೊಂಡರಾತು’

● ಎಸ್. ನಟರಾಜ ಬೂದಾಳು